ನಿಮ್ಮ ಸೈಕಲು ಕೊಂಡು ಹೋಗಿ' ಎಂದೂ ಹೇಳಿದರು.

ಕುಪ್ಪಣ್ಣಯ್ಯ ರಾತ್ರೆ ಎಂದಿನಂತೆ ಮನೆಗೆ ಬಂದಾಗ ದಿನನಿತ್ಯದ ಹಾಗೆ ಅವರನ್ನು ಸ್ವಾಗತಿಸಿದ ಅವರ ಧರ್ಮಪತ್ನಿ ಪ್ರೇಮಕ್ಕ 'ಏನು ನೀವು ಇದ್ದಕ್ಕಿದ್ದ ಹಾಗೆ ಬೆಳಗ್ಗೆ ಆ ಸಾಬಿಯನ್ನು ಕರಕೊಂಡು ಮನೆಗೆ ಬಂದು, ಆ ಕರಿಬೇವಿನ ಕೊಂಬೆಗಳನ್ನು ಕಡಿಸಿದ್ದು?' ಎಂದು ಪ್ರಶ್ನಿಸಿ 'ನಮ್ಮ ಮಕ್ಕಳ ಹಾಗೆ ಅವು ಬೆಳೆದಿವೆ. ಅವುಗಳ ಕೊಂಬೆ ರೆಂಬೆ ಕತ್ತರಿಸುವಾಗ ನಮ್ಮ ಮಕ್ಕಳ ಕೈ ಕಡಿದ ಹಾಗೆ ಅನಿಸಿತು ನನಗೆ' ಎಂದು ಖೇದ ವ್ಯಕ್ತಪಡಿಸಿದರು.

ಕುಪ್ಪಣ್ಣಯ್ಯ ಒಂದು ನಿಮಿಷ ಮಾತನಾಡಲಿಲ್ಲ. ಆಮೇಲೆ 'ನಿನಗೆ ಆ ಹುಸೇನಿಯ ಕತೆ ಗೊತ್ತಾ?' ಎಂದು ಗಂಭೀರವಾಗಿ ಪ್ರಶ್ನಿಸಿ, 'ಅದಕ್ಕಾಗಿಯೇ ಸ್ವಲ್ಪ ದಿನಗಳ ಹಿಂದೆ ಅವನನ್ನು ಕರೆತಂದಿದ್ದೆ. ಆಗ ನೀನು ಕರಿಬೇವಿನ ಗಿಡದ ಕೊಂಬೆ ರೆಂಬೆ ಕಡಿಸುತ್ತೀರಾ.. ಎಂದು ಕೇಳಿದ್ದೆ. ನಾನು ಆಗ ಹಾಗೇನಿಲ್ಲ ಎಂದಿದ್ದೆ. ನೀನು ಇದಕ್ಕೆ ಒಪ್ಪುವುದಿಲ್ಲ ಎಂದು ಗೊತ್ತಿತ್ತು. ಆದರೆ ಒಂದು ಜೀವ ಉಳಿಸಲಿಕ್ಕೆ ಈ ಕರಿಬೇವಿನ ಸೊಪ್ಪು ನೆರವಾಗುವುದಾದರೆ, ಆಗಲಿ ಎಂದು ಕೊಟ್ಟೆ. ಆದರೆ ಮಾರಾಟ ಮಾಡಿಲ್ಲ, ಕ್ಷಮಿಸು' ಎಂದರು.

'ನನಗೆ ಅವನ ಕತೆ ಯಾಕೆ ಬೇಕು?' ಎಂದು ಪ್ರೇಮಕ್ಕ ಪ್ರಶ್ನಿಸಿದಾಗ, 'ಬಾ, ಇಲ್ಲಿ ಕುಳಿತುಕೋ' ಎಂದು ಹೆಂಡತಿಯನ್ನು ತಾನು ಕುಳಿತ ಮಂಚಕ್ಕೆ ಕರೆದ ಕುಪ್ಪಣ್ಣಯ್ಯ, ಪ್ರೇಮಕ್ಕ ಬಂದು ಕುಳಿತುಕೊಳ್ಳುತ್ತಿದ್ದಂತೆ 'ನಿನಗೆ ಬಚ್ಚಿರೆ ಬಾಯಿಯ ಹೆಸರು ಗೊತ್ತೊ?' ಎಂದು ನಗುತ್ತಾ ಪತ್ನಿಯ ಮುಖ ನೋಡಿದರು.

ಪ್ರೇಮಕ್ಕ 'ಬಚ್ಚಿರೆ ಬಾಯಿ ಅಂದರೆ ವೀಳ್ಯದೆಲೆ ಮಾರಾಟ ಮಾಡುವವಳು ತಾನೇ? ನೀವು ಅನೇಕ ಬಾರಿ ಯಾವುದೋ ಸಂದರ್ಭದಲ್ಲಿ ಅವಳ ಹೆಸರು ನನ್ನ ಇದಿರು ಹೇಳಿರಬಹುದು. ಆಗ ನಾನು ಕುತೂಹಲ ತೋರಿಸಿಲ್ಲ. ಈಗಲೂ ನನಗೆ ಆಸಕ್ತಿ ಇಲ್ಲ' ಎಂದರು.

ಕುಪ್ಪಣ್ಣಯ್ಯ, 'ಆ ಬಚ್ಚಿರೆ ಬಾಯಿ ಜೀವನದಲ್ಲಿ ಎಷ್ಟು ಕಷ್ಟಪಟ್ಟಿದ್ದಾಳೆ ಅಂದರೆ, ನನಗೆ ಅವಳು ತನ್ನ ಗಂಡನ ಕುಡುಕುತನದ ವಿಚಾರ ಹೋಟೆಲಿನಲ್ಲಿ ಬಂದು ಹೇಳುವಾಗ ಕಣ್ಣು ಹನಿಗೂಡುತ್ತಿತ್ತು' ಎಂದು ಹೇಳಿದವರೇ 'ಒಂದು ಕತೆ ಹೇಳ್ತೇನೆ ಕೇಳು' ಎಂದು, ಬಚ್ಚಿರೆ ಬಾಯಿಯ ಕತೆ ಹೇಳಲು ಮುಂದಾದರು. ಪ್ರೇಮಕ್ಕನಿಗೆ ಕತೆ ಕೇಳಲು ಇಷ್ಟ ಇಲ್ಲದಿದ್ದರೂ ಗಂಡನನ್ನು ನೋಯಿಸಬಾರದೆಂಬಂತೆ ಆಕೆ 'ಹ್ಞೂ' ಎನ್ನುವಂತೆ ಮೌನವಾದರು.

ಮಿತ್ತೊಟ್ಟು ಇನಾಸ ಪುರ್ಬು ಅಂದರೆ ಒಂದು ಕಾಲದಲ್ಲಿ ಅಂದರೆ ಸುಮಾರು ಹತ್ತಿಪ್ಪತ್ತು ವರುಷಗಳ ಹಿಂದೆ- ಸೀತಾಪುರದ ಬೀದಿಯಲ್ಲಿ ಎಲ್ಲರಿಗೂ 'ಚಿರಪರಿಚಿತ'ನಾದ ವ್ಯಕ್ತಿ. ಆತ ಚಿರಪರಿಚಿತನಾದದ್ದು ಸಮಾಜಮುಖಿ ಕೆಲಸದಿಂದಲ್ಲ. ಮೂಗಿನ ಮೇಲಿನ ತನಕ ಕುಡಿದು- ಹಗಲು ರಾತ್ರಿಯೆನ್ನದೆ –ರಸ್ತೆಯನ್ನು ಉದ್ದ ಅಗಲಕ್ಕೆ ಅಳೆಯುತ್ತಾ ಬಾಯಿಗೆ ಬಂದ ಹಾಗೆ - ಸಿಕ್ಕು ಸಿಕ್ಕವರಿಗೆ ಬೈಗಳ ಸುರಿಮಳೆ ಕರೆಯುವುದರಿಂದ. ಒಮ್ಮೊಮ್ಮೆ ಅವನು ಆ ರೀತಿ ವರ್ತಿಸಲೂ ಅಸಾಧ್ಯವಾಗಿ ರಥಬೀದಿಯ ಮಾವಿನ ಮರದ ಇಲ್ಲವೇ ಅಶ್ವತ್ಥ ಮರದ ನೆರಳಲ್ಲೋ ಬೀಳುವುದಿತ್ತು. ನಡುರಾತ್ರೆ ಎಚ್ಚರವಾಗಿ ಮನೆಗೆ ಹೋಗಿ 'ಮುಂಡೆ ನೀನು ಯಾಕೆ ನನ್ನನ್ನು ಕರೆದೊಯ್ಯಲು ರಥಬೀದಿಗೆ ಬರಲಿಲ್ಲ?' ಎಂದು ಹೆಂಡತಿಗೆ ಹೊಡೆಯುವುದೂ ಇತ್ತಂತೆ. ಇದನ್ನೆಲ್ಲ ಸಹಿಸಿಕೊಂಡು ಸಂಸಾರವನ್ನು ಅನುಭವಿಸುತ್ತಿದ್ದ ಬಚ್ಚಿರೆ ಬಾಯಿ ಅರ್ಥಾತ್ ನತ್ತಲಾಳಿಗೆ, ಗಂಡನನ್ನು ಬಿಟ್ಟು ತವರಿಗೆ ಹೋಗಲೂ ಅಲ್ಲ, ಇಲ್ಲಿದ್ದು ಬದುಕಲೂ ಅಲ್ಲ ಎಂಬ ಸ್ಥಿತಿ ಇತ್ತು.

ಈ ದಂಪತಿಗೆ ಸಿರಿಲ್ ಎಂಬ ಒಬ್ಬನೇ ಒಬ್ಬ ಮಗನಿದ್ದ. ಆತ ಓದಿನಲ್ಲಿ ಆಟೋಟಗಳಲ್ಲಿ ತುಂಬಾ ಜಾಣನಿದ್ದ. ಒಂದು ಸಲ ಕಬಡ್ಡಿ ಆಟದಲ್ಲಿ, ಬಿದ್ದು ಕೈಮುರಿದುಕೊಂಡ. ಆ ನೋವನ್ನು ಅನುಭವಿಸುತ್ತ ಆತ ಮನೆಗೆ ಬಂದಾಗ ಇನಾಸ, ದುಡ್ಡು ಇಲ್ಲದೆಯೋ ಏನೋ ಎಂಬಂತೆ ಕುಡಿಯದಿದ್ದ. ಆ ದಿನ ಕುಡಿಯುವುದಕ್ಕೆ ಎಂಬಂತೆ ಮನೆಯಿಂದ ಯಾವ ವಸ್ತುವನ್ನು ಕೊಂಡೊಯ್ದು ಮಾರಬಹುದು ಎಂಬ ಲೆಕ್ಕಾಚಾರದಲ್ಲಿ ಇದ್ದಂತಿದ್ದ. ಕುಡಿತದ ಸಮಯದಲ್ಲಿ ಹೆಂಡತಿ ಮಕ್ಕಳನ್ನು ತಿಕಮುಖ ನೋಡದೆ ಹಂಗಿಸುತ್ತಿದ್ದ ಇನಾಸ, ಕುಡಿಯದಿದ್ದರೆ, ಇಬ್ಬರನ್ನೂ ತಲೆಯಲ್ಲಿಟ್ಟು ಕುಣಿಯಲೂ ಸಿದ್ಧನಿದ್ದ. ಮಗನ ನೋವನ್ನು ಕಂಡ ಇನಾಸನಿಗೆ 'ಅಯ್ಯೋ' ಅನಿಸಿತು. ಈಗಿಂದಲೇ ಅವನನ್ನು ಕಾರ್ಕಳಕ್ಕೆ ಕರಕೊಂಡು ಹೋಗಿ ಚಿಕಿತ್ಸೆ ಕೊಡಿಸಬೇಕೆಂದರೆ ಅವನ ಕೈಯಲ್ಲಿ ಚಿಕ್ಕಾಸೂ ಇರಲಿಲ್ಲ. 'ನಿನ್ನಲ್ಲಿ ಏನಾದರೂ ಇದೆಯಾ ನತ್ತಲಾ?' ಎಂದು ಪತ್ನಿಯನ್ನು ಕೇಳಿದ. ಆಕೆ 'ನನ್ನಲ್ಲಿರುವುದು